

# ಪರ್ಪಲ್ ಎಂಜೆಲೋನಿಯಾ!

■ **ಚಿತ್ರ-ಬರಹ: ದಿನೇಶ್ ಸಿ.ಎಚ್.**

ನಾಲ್ಕು ದಿಕ್ಕುಗಳಿಗೂ ಹರಡಿರುವ ಸ್ವಲ್ಪ ಮೊನಚಾದ ಹಸಿರಿನ, ಆಕರ್ಷಕ ಎಲೆಗಳಿಂದಲೇ ಎಲ್ಲರನ್ನೂ ಸೆಳೆಯುವ ಸುಂದರ ಸಸ್ಯ ಎಂಜೆಲೋನಿಯಾ! ಈ ಸಸ್ಯವು ಸಾಮಾನ್ಯವಾಗಿ ನೇರಳೆ ಬಣ್ಣದಲ್ಲಿದ್ದು ವೈಜ್ಞಾನಿಕ ಹೆಸರು ಎಂಜೆಲೋನಿಯಾ ಆಂಗಸ್ಟಿಫೋಲಿಯಾ. ಪ್ಲಾಂಟಾಜಿನೆಸಿಯಾ ಎಂಬ ಸಸ್ಯ ಕುಟುಂಬಕ್ಕೆ ಸೇರಿದೆ.

ಇದೊಂದು ಅಲಂಕಾರಿಕ ಹೂವಿನ ಗಿಡವಾಗಿದ್ದು ಗೆಲ್ಲುಗಳಿಂದ ಇದರ ಸಸ್ಯಾಭಿವೃದ್ಧಿ ಸಾಧ್ಯ. ನಾಲ್ಕು ಕಡೆಗಳಲ್ಲಿ ಅಭಿಮುಖ ಜೋಡಣೆಯಾಗಿರುವ, ತುದಿ ಮೊನಚಾದ ಎಲೆ ಮತ್ತು ಅಚ್ಚ ನೇರಳೆ ಬಣ್ಣದ ಐದು ಎಸಳುಗಳಿರುವ ಈ ಹೂಗಳು ಗೊಂಚಲಾಗಿ ಇರುತ್ತವೆ. ಪ್ರತಿಯೊಂದು ಹೂವು ಎಲೆಯ ಬುಡದಿಂದ ಬರುವುದು ವಿಶೇಷ.

ಈ ಹೂವು ಸಾಮಾನ್ಯವಾಗಿ ಸ್ನಾಪ್‌ಡ್ರ್ಯಾಗನ್ ಹೂವನ್ನು ಹೋಲುತ್ತದೆ. ಅಂತೆಯೇ ನೋಡಲು ಗೂಬೆಯಂತಿರುವುದು ಇನ್ನೊಂದು ವಿಶೇಷ. ದಳಗಳು ಹೊರಚಾಚಿದ್ದು ಒಳಭಾಗದಲ್ಲಿ ತಿಳಿ ನೇರಳೆ ಬಣ್ಣವಿದ್ದು ಕಡು ನೇರಳೆ ಬಣ್ಣದ ಅನೇಕ ಚುಕ್ಕಿಗಳು ಆಕರ್ಷಣೆಯನ್ನು ಹೆಚ್ಚಿಸಿವೆ. ಮೇಲಿನ ಭಾಗದಲ್ಲಿ ಹೊರಚಾಚಿದ ಸಣ್ಣ ಶ್ವೇತ ಶಲಾಕೆ, ಕೆಳ ಭಾಗದಲ್ಲಿ ಸಣ್ಣ ಕೊಕ್ಕಿನಂತಿದೆ. ಈ ಹೂವನ್ನು ತಲೆಕೆಳಗಾಗಿ ಹಿಡಿದು ನೋಡಿದರೆ ಯಾವುದೋ ಹಕ್ಕಿಯೊಂದು ಹಾರುತ್ತಿರುವಂತೆ ಕಾಣಿಸುತ್ತದೆ.

ಬರೀ ನೀರಿನ ಆಶ್ರಯದಿಂದಲೂ ಬದುಕುವ ಸಸ್ಯ ಇದಾಗಿದ್ದು ಹೂ ಕುಂಡಗಳಲ್ಲಿ ಬೆಳೆಸಬಹುದು. ಗೊಬ್ಬರ ಹಾಕಿದರೆ ಸೊಗಸಾಗಿ ಬೆಳೆಯುತ್ತದೆ. ಸಣ್ಣ ಕುರುಚಲಾಗಿ ಹಬ್ಬುವ ಸಸ್ಯ ಇದಾಗಿದ್ದು ಇದರ ಹೂವನ್ನು ವಿವಿಧ ಅಲಂಕಾರಕ್ಕಾಗಿ ಬಳಸುತ್ತಾರೆ. ಬೇಸಿಗೆಯಲ್ಲಿ ಹೆಚ್ಚಾಗಿ ಅರಳುವ ಈ ಹೂಗಳು ಮೆಕ್ಸಿಕನ್ ಮೂಲದ್ದು. ಆದರೆ ಬಿಸಿಲು ಬೀಳುವ ಎಲ್ಲಾ ಪ್ರದೇಶಗಳಿಗೂ ಒಗ್ಗಿಕೊಳುವ ವಿಶೇಷ ಗುಣವಿದೆ.